# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.33/2019

PW-05

CW-07

| | |
|---|---|
| ಸಾಕ್ಷಿದಾರರ ಹೆಸರುಃ | ಪ್ರವೀಣ ಮಡಿವಾಳರ |
| ತಂದೆಃಗಂಡನ ಹೆಸರುಃ | ಗಂಗಪ್ಪ |
| ವಯಸ್ಸುಃ | 24 ವರ್ಷ |
| ಉದ್ಯೋಗಃ | ಕೂಲಿ |
| ವಾಸ ಸ್ಥಳಃ | ಹಾವೇರಿ |

**ದಿನಾಂಕ:15.09.2021 ರಂದು ಸಾಕ್ಷಿ ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಎಲ್ಲಾ ಆರೋಪಿತರ ಹಾಗು ಚಾಸಾ-1, 4 ರಿಂದ 6, 8 ರವರ ಪರಿಚಯವಿದೆ. ನಮ್ಮ ಮತ್ತು ಆರೋಪಿತರ ನಡುವೆ ಹಳೆಯ ವಿಚಾರದಲ್ಲಿ ಬಾಯಿ ಮಾತಿನ ಜಗಳವಾಗಿದ್ದು, ಅಷ್ಟನ್ನು ಹೊರತುಪಡಿಸಿ ಬೇರೇನೂ ಆಗಿರುವುದಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದಿರುವುದಿಲ್ಲ. ನಾನು ಪೊಲೀಸರಿಗೆ ಪಂಚನಾಮೆ ಮಾಡಲು ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ ಹಾಗು ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡುವುದಾಗಲೀ, ಕಚ್ಚಾ ನಕ್ಷೆ ತಯಾರಿಸಿ ಫೋಟೋಗಳನ್ನು ತೆಗೆಸುವುದನ್ನಾಗಲೀ ಮಾಡಿರುವುದಿಲ್ಲ. ಸಾಕ್ಷಿ ಪಂಚನಾಮೆ, ಕಚ್ಚಾ ನಕ್ಷೆ ಹಾಗು ಫೋಟೋಗಳನ್ನು ನೋಡಿ ಗುರ್ತಿಸಿದ್ದು, ಅವುಗಳನ್ನು ನಿಪಿ-6 ರಿಂದ 10 ಕ್ಕೆ ಹಾಗು ಸಾಕ್ಷಿ ಸಹಿಗಳನ್ನು ನಿಪಿ-6(ಎ) ಮತ್ತು ನಿಪಿ-7(ಎ) ಗೆ ಗುರ್ತಿಸಲಾಯ್ತು. ಸಾಕ್ಷಿಯು ಫೋಟೋಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರ್ತಿಸಿರುತ್ತಾರೆ.

ದಿನಾಂಕಃ05.06.2019 ರಂದು ಪೊಲೀಸರು ಆರೋಪಿತರು ಸಾಗಣೆ ಮಾಡುತ್ತಿದ್ದ ಎತ್ತು ಹಾಗು ವಾಹನವನ್ನು ನನ್ನ ಹಾಗು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡಿರುವುದಿಲ್ಲ ಆದರೆ ಒಂದು ದಾಖಲೆಗೆ ಸಹಿ ಪಡೆದು ನನ್ನನ್ನು ನಿಲ್ಲಿಸಿ ಫೋಟೋ ತೆಗೆದಿರುತ್ತಾರೆ. ಅಮಾನತ್ತು ಪಂಚನಾಮೆ ಹಾಗು ಫೋಟೋವನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಅವುಗಳನ್ನು ನಿಪಿ-11 ರಿಂದ 12 ಕ್ಕೆ ಹಾಗು ಸಾಕ್ಷಿ ಸಹಿಗಳನ್ನು ನಿಪಿ-11(ಎ) ಗೆ ಗುರ್ತಿಸಲಾಯ್ತು. ಸಾಕ್ಷಿಯು ಫೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರ್ತಿಸಿರುತ್ತಾರೆ. ಯಾವ ಕಾರಣಕ್ಕಾಗಿ ಪಂಚನಾಮೆಗಳಿಗೆ ಸಹಿ ಪಡೆದರು ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಅಮಾನತ್ತುಪಡಿಸಿಕೊಂಡ ಎತ್ತು ಹಾಗು ಆಟೋ ನೋಡಿದರೆ ಗುರ್ತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕಃ05.06.2019 ರಂದು ಪೊಲೀಸರು ನನ್ನ ಹೇಳಿಕೆ ಪಡೆದಿದ್ದು, ಸದರಿ ಹೇಳಿಕೆಯಲ್ಲಿ ದಿನಾಂಕಃ04.06.2019 ರಂದು ಸಂಜೆ 7.00 ಗಂಟೆಗೆ ಹಾವೇರಿಯ ಶಿವಲಿಂಗನಗರದ 4 ನೇ ತಿರುವಿನಲ್ಲಿರುವ ಅಶೋಕ ಕರ್ಜಗಿಯವರ ಮನೆ ಮುಂದಿನ ರಸ್ತೆಯಲ್ಲಿ ನಾವು ನಿಂತಿರುವಾಗ ಚಾಸಾ-8-ಹೊಸಮನಿ ಟಾಟಾ ಎ.ಸಿ ವಾಹನ ನಂ.ಕೆಎ-26/ಎ-0118 ರಲ್ಲಿ ಒಂದು ಎತ್ತು ಹಾಗು ಎಮ್ಮೆಯನ್ನು ತೆಗೆದುಕೊಂಡು ಬಂದಿದ್ದನ್ನು ನೋಡಿದ ನಾವು ಸದರಿ ವಾಹನ ನಿಲ್ಲಿಸಿ ಅವುಗಳನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೀರಾ ಎಂದು ಕೇಳುತ್ತಿರುವಾಗ ಆರೋಪಿತರೆಲ್ಲರೂ ಗುಂಪು ಕಟ್ಟಿಕೊಂಡು ನನಗೆ ಚಾಸಾ-1, 4 ರಿಂದ 6 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು, ನಾವು ಸದರಿ ಎತ್ತು ಹಾಗು ಎಮ್ಮೆಯನ್ನು ಕಡಿಯಾಕೆ ತಂದೀರಿ ಎಂದು ಕೇಳುತ್ತಿದ್ದಾಗ ಆರೋಪಿತರು ಚಾಸಾ-1 ವಾಲ್ಮೀಕಿ ಜಾತಿಗೆ ಸೇರಿದವನೆಂದು ಗೊತ್ತಿದ್ದರೂ ಸಹ ಸಾರ್ವಜನಿಕವಾಗಿ ಜಾತಿ ಹಿಡಿದು ಅವಾಚ್ಯ ಶಬ್ದಗಳಿಂದ ಬೈದು ನಂತರ ಬಡಿಗೆಗಳಿಂದ ಹಾಗು ಕೈಗಳಿಂದ ನಮಗೆ ಹಲ್ಲೆ ಮಾಡಿ ಸಾಮಾನ್ಯ ಹಾಗು ತೀವ್ರ ಸ್ವರೂಪದ ಗಾಯಪಡಿಸಿ ಜೀವ ಬೆದರಿಕೆ ಹಾಕಿದರು ಎಂದು ಹೇಳಿಕೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಹೇಳಿಕೆಯನ್ನು ನಿಪಿ-13 ಕ್ಕೆ ಗುರ್ತಿಸಲಾಯ್ತು.

ದಿನಾಂಕಃ05.06.2019 ರಂದು ನಾನು ತೋರಿಸಿದ ಕೃತ್ಯ ಸ್ಥಳದಲ್ಲಿ ಸಂಜೆ 5.45 ರಿಂದ 7.00 ಗಂಟೆಯವರೆಗೆ ಪೊಲೀಸರು ನನ್ನ ಮತ್ತು ಪಂಚರ ಸಮಕ್ಷಮ ಕೃತ್ಯ ಸ್ಥಳದಲ್ಲಿ ಪಂಚನಾಮೆ ಜರುಗಿಸಿ , ಕಚ್ಚಾ ನಕ್ಷೆ ತಯಾರಿಸಿ ಪೋಟೋಗಳನ್ನು ತೆಗೆದರು ಎಂದು ಸೂಚಿಸುವುದು ಸರಿಯಲ್ಲ. ಅದೇ ದಿನ ಅಂದರೆ ದಿನಾಂಕಃ05.06.2019 ರಂದು ಪೊಲೀಸರು ಆರೋಪಿತರು ಸಾಗಣೆ ಮಾಡುತ್ತಿದ್ದ ಎತ್ತು ಹಾಗು ವಾಹನವನ್ನು ನನ್ನ ಹಾಗು ಪಂಚರ ಸಮಕ್ಷಮ ಪಂಚನಾಮೆ ಮಾಡಿ ಜಪ್ತಿ ಮಾಡಿಕೊಂಡು ಸಹಿ ಪಡೆದು, ನನ್ನನ್ನು ನಿಲ್ಲಿಸಿ ಪೋಟೋ ತೆಗೆದಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

ನಿಪಿ-13 ರಂತೆ ಹೇಳಿಕೆ ನೀಡಿದ್ದರೂ ಹಾಗು ನನ್ನ ಸಮಕ್ಷಮ ಪಂಚನಾಮೆಗಳನ್ನು ಮಾಡಿದ್ದರೂ ಸಹ ನಾವು ಮತ್ತು ಆರೋಪಿತರು ರಾಜೀ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷಿ ಹೇಳಿದ್ದೇನೆಂದು ಸೂಚಿಸುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಂ.ಎಂ.ಸಿ ವಕೀಲರಿಂದಃ**

ಶ್ರೀ ಎಂ.ಎಂ.ಸಿ ವಕೀಲರು ಪಾಟೀ ಸವಾಲು ಇಲ್ಲ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

(ಈ. ರಾಜೀವ ಗೌಡ)

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.